# ನೂತನ ಎಸಿಟಿ ಫೈಬರ್‌ನೆಟ್ ಬಿಡುಗಡೆ

ಬೆಂಗಳೂರು, ಆ. ೩- ನಗರದ ಆಟ್ರಿಯಾ ಕನ್ವರ್ಜೆನ್ಸ್ ಟೆಕ್ನಾಲಜೀಸ್ ಸಂಸ್ಥೆ (ಎಸಿಟಿ) ಕಾರ್ಯತಾಂತ್ರಿಕ ಯೋಜನೆಗಾಗಿ ನೂತನ ಎಸಿಟಿ ಫೈಬರ್‌ನೆಟ್‌ನ್ನು ಬಿಡುಗಡೆ ಮಾಡಿದೆ.

ಈ ಬ್ರ್ಯಾಂಡ್ ಗ್ರಾಹಕರಿಗೆ ಫೈಬರ್ ಆಪ್ಟಿಕ್ಸ್‌ನ ಸೀಮಾತೀತ ತಂತ್ರಜ್ಞಾನದ ಮೂಲಕ ಅತ್ಯಂತ ವೇಗದ ಸಮಂಜಸವಾದ ಇಂಟರ್‌ನೆಟ್ ಸೇವೆಗಳನ್ನು ಒದಗಿಸಲಿದೆ ಎಂದು ಎಸಿಟಿ ಸಮೂಹದ ಸಿಇಓ ಬಾಲ ಮಲ್ಲಾಡಿ ತಿಳಿಸಿದ್ದಾರೆ.

ಗ್ರಾಹಕರನ್ನು ಗಮನದಲ್ಲಿಟ್ಟುಕೊಂಡು ಈಗಿನ ಯೋಜನೆಗಳನ್ನು ಉನ್ನತೀಕರಿಸಿಕೊಂಡು ಹೆಚ್ಚುವರಿ ಖರ್ಚಿಲ್ಲದೆ ಇಂಟರ್‌ನೆಟ್ ಬಳಸಲು ಅವಕಾಶವಿದೆ ಎಂದು ಅವರು ತಿಳಿಸಿದ್ದಾರೆ.